> ಪ್ರಖ್ಯಾತಿ ನಿಮ್ಮ ಖಾಸಗೀ ಜೀವನದ ಮೇಲೆ ಆಕ್ರಮಣ ಮಾಡುತ್ತದೆ. ನಿಮಗೆ ನಿಮ್ಮ ಮಹತ್ವದ ಕಾರ್ಯ ಮಾಡುವುದು ಸಾಧ್ಯವಾಗುವುದಿಲ್ಲ. ಆಗ ನಿಜವಾದ ಜಗತ್ತಿನಿಂದ ದೂರವಾಗುತ್ತೀರಿ. ನಿಮ್ಮನ್ನು ಆದರಿಂದ ಬೇರ್ಪಡಿಸಲಾಗುತ್ತದೆ. ತನ್ನ ಬರವಣಿಗೆಯನ್ನು ಮುಂದುವರಿಸಲು ಬಯಸುವ ಲೇಖಕನು ಪ್ರಖ್ಯಾತಿಯ ಸಮರ್ಥನೆ ಮಾಡುತ್ತಾನೆ.

ನೀವು ಅಧಿಕ ಶಕ್ತಿಶಾಲಿಯಾಗಿದ್ದಾಗ ಯಾರು ಸತ್ಯ ಹೇಳುತ್ತಾರೆ, ಯಾರು ಸುಳ್ಳು ಹೇಳುತ್ತಾರೆ ಎಂಬುದನ್ನು ಅರಿಯುವುದು ಕಷ್ಟವಾಗುತ್ತದೆ. ನೀವು ವಾಸ್ತವದೊಂದಿಗೆ ಹೊಂದಿದ್ದ ಸಂಬಂಧ ಸಂಪೂರ್ಣವಾಗಿ ನಾಶಹೊಂದಿರುತ್ತದೆ ಮತ್ತು ಈ ಏಕಾಂಗಿತನ ಭೀಕರವಾಗಿರುತ್ತದೆ. ತಮ್ಮ ಸ್ವಾರ್ಥ ಸಾಧನೆಗಾಗಿ ಜನರು ಸರ್ವಾಧಿಕಾರಿಯನ್ನು ಮುತ್ತುತ್ತಾರೆ; ಅವನನ್ನು ವಾಸ್ತವದಿಂದ ಅನತಿ ದೂರಕ್ಕೆ ಒಯ್ಯುವುದೇ ಎಲ್ಲರ ಅಂತಿಮ ಉದ್ದೇಶವಾಗುತ್ತದೆ.

◆ ಲೇಖಕನ ಏಕಾಂಗಿತನ ಇದಕ್ಕಿಂತ ಭಿನ್ನವೇ?

ಅವನ ಏಕಾಂಗಿತನ ಸಹ ಪ್ರಭುತ್ವದೊಂದಿಗೇ ಸಂಬಂಧವನ್ನು ಹೊಂದಿದೆ. ವಾಸ್ತವದ ಚಿತ್ರಣ ಮಾಡುವ ಒಂದು ಪ್ರಯತ್ನವು ಅವನನ್ನು ಜೀವನದ ವಿಕೃತ ದರ್ಶನ ಮಾಡಿಸುವತ್ತ ಒಯ್ಯುತ್ತದೆ. ಆಗವನು ವಾಸ್ತವದೊಂದಿಗಿನ ಸಂಬಂಧವನ್ನೇ ಕಳಚಿಕೊಳ್ಳುತ್ತಾನೆ. ಅವನು ಗಾಜಿನ ಗೋಪುರವನ್ನು ನಿರ್ಮಾಣ ಮಾಡುತ್ತಾನೆ. ಈ ಕಾರಣಕ್ಕಾಗೇ ಪತ್ರಿಕೋದ್ಯಮಕ್ಕೆ ಮಹತ್ವವಿದೆ. ಅದು ಗಾಜಿನ ಗೋಪುರದ ಬರವಣಿಗೆಯನ್ನು ವಿರೋಧಿಸುತ್ತದೆ. ಹೀಗಾಗಿ ನಾನು ರಾಜಕಾರಣ ಹಾಗೂ ರಾಜಕೀಯ ಪತ್ರಿಕೋದ್ಯಮದೊಂದಿಗೆ ಸಂಪರ್ಕವನ್ನು ಉಳಿಸಿಕೊಂಡೆ. 'ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್'ನಲ್ಲಿರುವುದು ಲೇಖಕನ ಏಕಾಂಗಿತನವಲ್ಲ, ಪ್ರಖ್ಯಾತಿಯ ಏಕಾಂಗಿತನ. ಈ ಏಕಾಂಗಿತನ ಪ್ರಭುತ್ವದ ಕಡೆಗೆ ಒಯ್ಯುವುದರಿಂದ ನಾನದರ ಬಗೆಗೆ ಸದಾ ಭಯಪಡುತ್ತೇನೆ. ಇಂಥ ಪ್ರಭುತ್ವದಿಂದ ಗೆಳೆಯರೇ ನನ್ನನ್ನು ಪಾರು ಮಾಡಿದ್ದಾರೆ. ಅವರು ನನ್ನನ್ನು ಮತ್ತೆಮತ್ತೆ ನೆಲಕ್ಕೆ ಎಳೆದು ತರುತ್ತಾರೆ.

◆ ನಿಮ್ಮ ಕಾದಂಬರಿಯಲ್ಲಿ ಅನಪೇಕ್ಷಿತ ಘಟನೆಯಾಗಲಿ, ಚಮತ್ಕಾರವಾಗಲಿ ಇರುತ್ತದೆಯೆ?

ಇದೆಲ್ಲ ಈ ಮೊದಲಿತ್ತು. ಆರಂಭದ ಕಥೆಗಳಲ್ಲಿ ಮೂಡ್ ಮಹತ್ವದ್ದಾಗಿರುತ್ತಿತ್ತು. ನಾನಾಗ ಅನಪೇಕ್ಷಿತಕ್ಕೆ ಮಹತ್ವ ನೀಡುತ್ತಿದ್ದೆ. ನಾನು ಯುವಕನಾಗಿದ್ದಾಗ ಇದೆಲ್ಲ ನಡೆಯುತ್ತಿತ್ತು. ಆಗ ಪ್ರೇರಣೆ ಸಾಕಷ್ಟು ಇತ್ತು. ಕೆಲವು ತಂತ್ರದ ಅಗತ್ಯವೂ ಇತ್ತು. ತಾರುಣ್ಯದಲ್ಲೇ ನಾನಿದನ್ನೆಲ್ಲ ಕಲಿತೆ. ಕೃತಿಯೊಂದರ ಶಿಲ್ಪ ಎನ್ನುವುದು ಸಂಪೂರ್ಣವಾಗಿ ತಾಂತ್ರಿಕ ಸಂಜ್ಞೆ. ಇದನ್ನು ತಾರುಣ್ಯದಲ್ಲೇ ಕಲಿಯಬೇಕು. ಅನಂತರ ಕಲಿಯುವುದು ಸಾಧ್ಯವಿಲ್ಲ. ಶಿಸ್ತು ಇರದೇ ಹೋದರೆ ಮಹತ್ವದ ಪುಸ್ತಕದ ರಚನೆ ಅಸಾಧ್ಯ.

◆ ನಿಮ್ಮ ಕೆಲಸದ ರೀತಿ ಹೇಗೆ?